ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 447
ಸದಸ್ಯರ ಹೆಸರು : ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 18.02.2022
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ರಾಜ್ಯದಲ್ಲಿ ಬೆಳೆ ಹಾನಿ ಪರಿಹಾರ ಕೋರಿ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿವೆ; (ಜಿಲ್ಲಾವಾರು ಮಾಹಿತಿ ನೀಡುವುದು) (ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಪ್ರವಾಹದಿಂದ ಬೆಳೆ ಹಾನಿಯಾದ ಒಟ್ಟಾರೆ 18.02ಲಕ್ಷ ರೈತರಿಗೆ ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿಯನ್ನು ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗಿದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ).
ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ.</td></tr>
<tr><td>(ಆ) ಬೆಳೆ ಹಾನಿ ಪರಿಹಾರ ನೀಡಲು ಸರ್ಕಾರದ ನಿಯಮ/ಮಾನದಂಡಗಳೇನು; (ಮಾಹಿತಿ ನೀಡುವುದು)</td><td>ರಾಜ್ಯದಲ್ಲಿ ಜುಲೈ ರಿಂದ ನವೆಂಬರ್ 2021ರ ಮಾಹೆಯಲ್ಲಿ ಉಂಟಾದ ಅತಿವೃಷ್ಟಿಯಿಂದ ಹಾನಿಯಾದ ಬೆಳೆಗಳಿಗೆ ಗರಿಷ್ಠ ಎರಡು ಹೆಕ್ಟೇರ್ ಗೆ ಸೀಮಿತಗೊಳಿಸಿ ಈ ಕೆಳಕಂಡಂತೆ ಇನ್‌ಪುಟ್ ಸಬ್ಸಿಡಿ ದರದಲ್ಲಿ ಪರಿಹಾರ ನೀಡಲಾಗಿದೆ.
<table>
<tr><th>ಬೆಳೆ ವಿವರ</th><th>ಮಾರ್ಗಸೂಚಿ ದರ (ಪ್ರತಿ ಹೆಕ್ಟೇರ್)ಗೆ</th><th>ಹೆಚ್ಚುವರಿ ದರ (ಪ್ರತಿ ಹೆಕ್ಟೇರ್)ಗೆ</th><th>ಪರಿಷ್ಕೃತ ದರ (ಪ್ರತಿ ಹೆಕ್ಟೇರ್)ಗೆ</th></tr>
<tr><td>ಮಳೆಯಾಶ್ರಿತ ಬೆಳೆ</td><td>ರೂ.6,800/-</td><td>ರೂ.6,800/-</td><td>ರೂ.13,600/-</td></tr>
<tr><td>ನೀರಾವರಿ ಬೆಳೆ</td><td>ರೂ.13,500/-</td><td>ರೂ.11,500/-</td><td>ರೂ.25,000/-</td></tr>
<tr><td>ಬಹುವಾರ್ಷಿಕ ಬೆಳೆ</td><td>ರೂ.18,000/-</td><td>ರೂ.10.000/-</td><td>ರೂ.28,000/-</td></tr>
</table>
ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳ ಜಂಟಿ ತಂಡದ ಸರ್ವೆಯನುಸಾರ ಬೆಳೆ ಹಾನಿ ವಿವರಗಳನ್ನು ಸಂಗ್ರಹಿಸಿ ಪರಿಹಾರ ತಂತ್ರಾಂಶದಲ್ಲಿ ನಮೂದಿಸಿದ ನಂತರ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಅನುದಾನ ಜಮೆಯಾಗುತ್ತದೆ.

ಪರಿಹಾರ ತಂತ್ರಾಂಶದಲ್ಲಿ ಅಳವಡಿಸುವ ಸಮಯದಲ್ಲಿ ರೈತರ ಪಹಣಿ ಹೆಸರು, ಆಧಾರ್ ಹೆಸರು ಹಾಗೂ ಬ್ಯಾಂಕ್ ಖಾತೆಯ ಹೆಸರು ಹೊಂದಾಣಿಕೆಯಾಗಬೇಕು ಹಾಗೂ ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಜೋಡಣೆಯಾಗಿರಬೇಕು.</td></tr>
<tr><td>(ಇ) ರೈತರ ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಆಗದಿರುವುದು, ಪಹಣಿ ಸಲ್ಲಿಕೆ ಹಾಗೂ ಇತರೆ ತಾಂತ್ರಿಕ ಸಮಸ್ಯೆಯಿಂದ ಅರ್ಜಿಗಳು ತಿರಸ್ಕೃತ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ, ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

(ಈ) ಈ ರೀತಿಯ ಸಣ್ಣಪುಟ್ಟ ತಾಂತ್ರಿಕ ಸಮಸ್ಯೆಯಿಂದ ತೊಂದರೆಯನ್ನು ನಿವಾರಿಸಿ ರೈತರಿಗೆ ಬೆಳೆಹಾನಿ ಪರಿಹಾರ ನೀಡಲು ಸರ್ಕಾರದ ನಿಲುವೇನು? (ವಿವರ ನೀಡುವುದು)</td><td>ಬಂದಿದೆ.

ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಆಗದೆ ಇರುವ ಅರ್ಜಿಗಳ ಮಾಹಿತಿಯನ್ನು ತಹಶೀಲ್ದಾರರಿಗೆ ರವಾನಿಸಲಾಗುತ್ತದೆ. ತಹಶೀಲ್ದಾರರು ಈ ಮಾಹಿತಿಯನ್ನು ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗಳ ಗಮನಕ್ಕೆ ತಂದು ಗ್ರಾಮ ಲೆಕ್ಕಾಧಿಕಾರಿಗಳು ರೈತರ ಬಳಿ ಹೋಗಿ ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಮಾಡಿಸುವಂತೆ ತಿಳಿಸುತ್ತಾರೆ. ನಂತರ, ರೈತರು ಬ್ಯಾಂಕ್‌ಗೆ ತೆರಳಿ ಮಾಹಿತಿ ನೀಡಿ ಆಧಾರ್ ಲಿಂಕ್ ಮಾಡಿಸುತ್ತಾರೆ. ತದನಂತರ, ಪರಿಹಾರ ತಂತ್ರಾಂಶದ ಮೂಲಕ ಇನ್‌ಪುಟ್ ಸಬ್ಸಿಡಿ ಜಮೆಯಾಗುತ್ತದೆ.</td></tr>
</table>

ಕಂಇ 67 ಟಿಎನ್‌ಆರ್ 2022

(ಆರ್. ಅಶೋಕ)
ಕಂದಾಯ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:-447 ಕ್ಕೆ

ಅನುಬಂಧ-1

Input subsidy payment details including revised norms of assistance in lakhs as on Feb 11th 2022

Sl. No.	District	No. of farmers paid	Amount paid as per norms in lakhs	Additional amount as per revised norms of assistance in lakhs	Total payment made in lakhs
1	Kalaburagi	215220	16333.38	16111.64	32443.94
2	Bidar	158049	9713.20	9636.84	19349.25
3	Tumakuru	141046	6492.63	6451.56	12943.48
4	Hassan	136950	7319.54	6200.52	13519.37
5	Belagavi	116006	10072.16	8862.44	18934.02
6	Dharwad	110575	9633.16	9611.08	19243.69
7	Chitradurga	98552	7274.82	7064.13	14338.45
8	Raichur	80451	6022.63	5347.81	11370.03
9	Chikkaballapura	80201	4488.14	4354.35	8842.09
10	Kolar	76263	3892.52	3732.34	7624.48
11	Gadag	64611	4115.37	3939.14	8054.18
12	Ramanagara	64528	2818.71	2806.82	5625.20
13	Haveri	64370	2816.64	2747.75	5564.07
14	Bagalkot	62953	5328.76	4754.72	10083.17
15	Koppal	60521	4079.96	3728.57	7808.23
16	Chikkamagaluru	56701	6642.00	4120.62	10762.34
17	Ballari	51992	5290.70	4556.09	9846.54
18	Kodagu	43979	6685.42	3790.02	10475.23
19	Davanagere	26683	1378.84	1254.13	2632.85
20	Bengaluru Rural	23021	1061.50	1036.14	2097.53
21	Shivamogga	12500	579.16	526.43	1105.53
22	Yadgir	11765	1174.95	1027.55	2202.44
23	Vijayanagara	11623	692.13	612.80	1304.87
24	Uttara Kannada	8139	269.59	255.34	524.89
25	Mysuru	7479	274.30	260.06	534.32
26	Mandya	5106	177.12	169.16	346.26
27	Chamarajanagara	4806	192.89	185.28	378.15
28	Bengaluru Urban	4745	222.30	216.78	439.05
29	Vijayapura	2526	180.69	157.95	338.63
30	Dakshina Kannada	932	59.81	33.90	93.70
31	Udupi	260	6.92	6.85	13.76
	Total	1802553	125289.94	113558.82	238839.76

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:447ಕ್ಕೆ ಅನುಬಂಧ-2				
PARIHARA FLOOD 2021-22 TALUK WISE PAYMENT				
Sl.No.	District	Taluk	Total Beneficiary Count	Total Amount in Rupees
1	ಬಳ್ಳಾರಿ	ಕಂಪ್ಲಿ	2990	46787481
2	ಬಳ್ಳಾರಿ	ಕುರುಗೋಡು	11700	245753854
3	ಬಳ್ಳಾರಿ	ಬಳ್ಳಾರಿ	17412	398930604
4	ಬಳ್ಳಾರಿ	ಸಂಡೂರು	3517	49156902
5	ಬಳ್ಳಾರಿ	ಸಿರುಗುಪ್ಪ	15449	221157382
6	ಬಳ್ಳಾರಿ	ಹಡಗಲಿ	58	601446
7	ಬಳ್ಳಾರಿ	ಹರಪನಹಳ್ಳಿ	321	2499676
ಒಟ್ಟು			**51447**	**964887344**
1	ವಿಜಯನಗರ	ಕೂಡ್ಲಿಗಿ	1466	18208083
2	ವಿಜಯನಗರ	ಕೊಟ್ಟೂರು	780	9150254
3	ವಿಜಯನಗರ	ಹಗರಿಬೊಮ್ಮನಹಳ್ಳಿ	1777	23040154
4	ವಿಜಯನಗರ	ಹಡಗಲಿ	1213	16448934
5	ವಿಜಯನಗರ	ಹರಪನಹಳ್ಳಿ	4389	31274180
6	ವಿಜಯನಗರ	ಹೊಸಪೇಟೆ	1992	32282051
ಒಟ್ಟು			**11617**	**130403656**